ಸಿ.ಟಿ. ರವಿ
ಉನ್ನತ ಶಿಕ್ಷಣ ಸಚಿವರು ಹಾಗೂ
ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ : ಕಛೇರಿ : 22255282
22033469
ಕೊಠಡಿ ಸಂಖ್ಯೆ: 252, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂಖ್ಯೆ: ಉಶಸ/272/12

ದಿನಾಂಕ: 08.02.2013

## ಟಿಪ್ಪಣಿ

ವಿಷಯ: "ಭಾವನಮನ" ಕಾರ್ಯಕ್ರಮವನ್ನು ಏರ್ಪಡಿಸುವ ಬಗ್ಗೆ.

-0-0-

ಭಾರತೀಯ ಸಂಸ್ಕೃತಿಯಲ್ಲಿ 'ತಂದೆ-ತಾಯಿ'ಗಳಿಗೆ ನೀಡಿರುವ ಸ್ಥಾನ ಅತ್ಯಂತ ಹಿರಿದಾದುದು. ಆದರೆ ಇತ್ತೀಚಿನ ದಿನಗಳಲ್ಲಿ, ಮಕ್ಕಳಲ್ಲಿ ಮತ್ತು ಯುವಜನಾಂಗದಲ್ಲಿ ತಾಯಿ ತಂದೆಯರ ಬಗ್ಗೆ ಇರಬೇಕಾದ ಗೌರವದ ಭಾವನೆಗಳು ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿವರ್ಷದ ಮಾರ್ಚ ತಿಂಗಳ 14ನೆಯ ದಿನಾಂಕವನ್ನು ರಾಜ್ಯದ ಎಲ್ಲ ಕಾಲೇಜುಗಳಲ್ಲಿಯೂ 'ಭಾವನಮನ' ವೆಂಬ ಕಾರ್ಯಕ್ರಮವನ್ನು ಏರ್ಪಡಿಸಿ, ವಿದ್ಯಾರ್ಥಿಗಳಲ್ಲಿ, ತಾಯಿ-ತಂದೆಯರ ಬಗ್ಗೆ ಗೌರವಭರಿತ ಪೂಜ್ಯ ಭಾವನೆಗಳನ್ನು ಉದ್ದೀಪಿಸುವಂತಹ ಉಪನ್ಯಾಸಗಳು, ಗೀತಗಾಯನ, ಆಶುಭಾಷಣ, ಪ್ರಬಂಧ ಸ್ಪರ್ಧೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲು ಸೂಚನೆಗಳನ್ನು ನೀಡಿ, ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಜವಾಬ್ದಾರಿಯನ್ನು ವಹಿಸಿ ಸರ್ಕಾರದಿಂದ ಒಂದು ಸುತ್ತೋಲೆಯನ್ನು ಹೊರಡಿಸಲು ಸೂಚಿಸಲಾಗಿದೆ.

ಈ ವರ್ಷದ 'ಭಾವನಮನ' ಕಾರ್ಯಕ್ರಮವನ್ನು ದಿನಾಂಕ:14.03.2013ರಂದು ನಡೆಸುವಂತೆ ಸುತ್ತೋಲೆಯಲ್ಲಿ ಸೂಚನೆ ನೀಡುವುದು.

ಈ ಸುತ್ತೋಲೆಯಲ್ಲಿ ಕೆಳಕಂಡ ಅಂಶಗಳನ್ನು ನಮೂದಿಸಿ, ಅವುಗಳನ್ನು ವಿಶ್ವವಿದ್ಯಾಲಯಗಳ ಕುಲಪತಿಗಳ ಮತ್ತು ಕಾಲೇಜುಗಳ ಪ್ರಾಂಶುಪಾಲರುಗಳ ಮೂಲಕ ಸೂಕ್ತ ರೀತಿಯಲ್ಲಿ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಿದೆ.

- ಮಾತೃದೇವೋಭವ, ಪಿತೃದೇವೋಭವ ಎಂಬ ಉಪನಿಷತ್ ವಾಕ್ಯ
- ತಾಯಿ ತಂದೆಯರ ಮೇಲಿನ ಗೌರವ ಭಾವನೆಯು ಕೌಟುಂಬಿಕ ಮೌಲ್ಯಗಳನ್ನು ಹೆಚ್ಚಿಸುತ್ತದೆ.
- ತಾಯಿಯು, ಮಗುವಿನ ಪಾಲನೆ ಪೋಷಣೆ ಮಾಡಿ, ತನಗೆ ಎಷ್ಟೇ ತೊಂದರೆ ಕಷ್ಟಗಳು ಎದುರಾದರೂ ಮಕ್ಕಳ ಹಿತವನ್ನು ರಕ್ಷಿಸುತ್ತಾಳೆ.

**ಸಿ.ಟಿ. ರವಿ**
ಉನ್ನತ ಶಿಕ್ಷಣ ಸಚಿವರು ಹಾಗೂ
ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ : ಕಛೇರಿ : 22255282
22033469
ಕೊಠಡಿ ಸಂಖ್ಯೆ: 252, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು



ಸಂಖ್ಯೆ: ............ ದಿನಾಂಕ: ..................................

- ತಂದೆಯು ಯಾವುದೇ ಕಷ್ಟವನ್ನಾದರೂ ಎದುರಿಸಿ ಮಕ್ಕಳನ್ನು ಬೆಳೆಸಿ, ಉತ್ತಮ ಶಿಕ್ಷಣ ನೀಡಿ, ಒಳ್ಳೆಯ ಜೀವನ ನಡೆಸಲು ಸಹಾಯ ಮಾಡುತ್ತಾನೆ.
- ತಾಯಿ ತಂದೆಯರ ಈ ತ್ಯಾಗಕ್ಕೆ ಮಕ್ಕಳು ಬೆಲೆ ಕಟ್ಟಲು ಮತ್ತು ಈ ಋಣವನ್ನು ತೀರಿಸಲು ಸಾಧ್ಯವಾಗುವುದಿಲ್ಲ.
- ತಾಯಿ ತಂದೆಯರನ್ನು ಚೆನ್ನಾಗಿ ನೋಡಿಕೊಂಡು ಅವರನ್ನು ವೃದ್ಧಾಶ್ರಮಗಳಿಗೆ ಕಳಿಸದೇ ತಮ್ಮೊಂದಿಗೆ ಗೌರವಯುತವಾಗಿ ಬದುಕಲು ಮಕ್ಕಳು ಅವಕಾಶ ಮಾಡಬೇಕು.
- ಇದು ಎಲ್ಲ ಮಕ್ಕಳ ಜವಾಬ್ದಾರಿ–ಇದನ್ನು ಅತ್ಯಂತ ಸಂತೋಷವಾಗಿ ನಿರ್ವಹಿಸಬೇಕು.
- 'ಅಪರೂಪಕ್ಕೆ ಕೆಟ್ಟ ಮಕ್ಕಳು ಹುಟ್ಟಬಹುದು ಆದರೆ ಕೆಟ್ಟ ತಾಯಿ ಹುಟ್ಟುವುದಿಲ್ಲ'– ಎಂಬುದು ಆಚಾರ್ಯವಾಣಿ.
- ತಾಯಿಗಿಂತ ಬಂಧುವಿಲ್ಲ : ಉಪ್ಪಿಗಿಂತ ರುಚಿಯಿಲ್ಲ, ಎಂಬುದು ಗಾದೆ ಮಾತು
- ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ 'ಭಾವನಮನ' ದಿನದಂದು ತಾಯಿ ತಂದೆಯವರಿಗೆ, ಅಭಿನಂದನೆ–ಧನ್ಯವಾದ–ಗೌರವ ಸಮರ್ಪಣೆ–ಗಳನ್ನು ವಿದ್ಯಾರ್ಥಿಗಳು ಅರ್ಪಿಸಲು ಆಯಾ ಕಾಲೇಜುಗಳು ವಿವಿಧ ರೀತಿಯ ಕಾರ್ಯಕ್ರಮಗಳನ್ನು, ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲು ರಾಜ್ಯದ ಎಲ್ಲ ಸರ್ಕಾರೀ ಕಾಲೇಜುಗಳು, ಅನುದಾನಿತ ಕಾಲೇಜುಗಳು, ಖಾಸಗೀ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು, ಬಿ.ಇಡಿ. ಕಾಲೇಜುಗಳು ಮತ್ತು ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಿಗೆ ಸೂಚನೆಗಳನ್ನು ನೀಡುವುದು.

(ಸಿ.ಟಿ.ರವಿ)

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**
ಉನ್ನತ ಶಿಕ್ಷಣ ಇಲಾಖೆ.